ದಿನಾಂಕ 26–4–2014 ರಂದು ಕೊಠಡಿ ಸಂ. 252. ಬಹುಮಹಡಿ ಕಟ್ಟಡ, ಬೆಂಗಳೂರಿನಲ್ಲಿ ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವ್ಯವಸ್ಥಾಪನಾ ಮಂಡಳಿಯ ಹತ್ತೊಂಭತ್ತನೇಯ ಸಭೆಯ ನಡುವಳಿಗಳು:

ಉಪಸ್ಥಿತರಿದ್ದ ಸದಸ್ಯರು:

| | | |
|---|---|---|
| 1. | ಡಾ. ಬಿ.ವಿ. ಪಾಟೀಲ | ಅಧ್ಯಕ್ಷರು |
| 2. | ಶ್ರೀ ಶ್ರೀ ಭರತ್‌ಲಾಲ್ ಮೀನಾ | ಸದಸ್ಯರು |
| 3. | ಶ್ರೀ ಹೆಚ್.ಎಸ್. ಸಾದತ್ ಅಲಿ ಖಾನ್ | ಸದಸ್ಯರು |
| 4. | ಶ್ರೀ ಪ್ರವೀಣ ವಿ. ನಾಯಕ್ | ಸದಸ್ಯರು |
| 5. | ಡಾ. ಕೆ.ಎಸ್. ವರಪ್ರಸಾದ್ | ಸದಸ್ಯರು |
| 6. | ಡಾ. ಪಿ. ಬಾಲಕೃಷ್ಣನ್ | ಸದಸ್ಯರು |
| 7. | ಡಾ. ಬಿ.ಎಸ್. ಜನಗೌಡರ್ | ಸದಸ್ಯ–ಕಾರ್ಯದರ್ಶಿ |

ಪ್ರಾರಂಭದಲ್ಲಿ, ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಹತ್ತೊಂಭತ್ತನೇಯ ಸಭೆಗೆ ಸರ್ವಸದಸ್ಯರನ್ನು ಮಾನ್ಯ ಕುಲಪತಿಗಳು ಹಾಗೂ ಸಭಾಧ್ಯಕ್ಷರು ಸ್ವಾಗತ ಕೋರಿದರು. ತದನಂತರ, ಕಾರ್ಯಸೂಚಿಯ ಪ್ರಕಾರ ಚರ್ಚಿಸಿ ಕೆಳಕಂಡಂತೆ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

**ಐಟಂ–1 & 2** **ದಿನಾಂಕ 17–2–2014 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಹದಿನೆಂಟನೇಯ ಸಭೆಯ ನಡುವಳಿಗಳನ್ನು ಸ್ಥಿರೀಕರಿಸುವುದು ಮತ್ತು ಅವುಗಳ ಪ್ರಕಾರ ಕೈಗೊಂಡ ಕ್ರಮಗಳನ್ನು ಅನುಮೋದಿಸುವುದು.**

**ಠರಾವು:**

ದಿನಾಂಕ 17–2–2014 ರಂದು ಜರುಗಿದ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಹದಿನೆಂಟನೇಯ ಸಭೆಯ ನಡುವಳಿಕೆಗಳನ್ನು ಓದಲಾಯಿತೆಂದು ಪರಿಗಣಿಸಿ, ಸ್ಥಿರೀಕರಿಸಲಾಯಿತು ಹಾಗೂ ಅನುಕ್ರಮ ಸಂ. 6 ನ್ನು ಅಂದರೆ ಶೇಕಡ 1 ರಷ್ಟು ಪ್ರೋತ್ಸಾಹ ಧನವನ್ನು ಪಿ.ಐ. ಅಥವಾ ಅಡ್–ಹಾಕ್ ಯೋಜನೆಗಳವರಿಗೆ ನೀಡುವ ಕುರಿತು ಸ್ಥಿರೀಕರಿಸುವಾಗ ಚಾಲ್ತಿಯಲ್ಲಿರುವ ಮೊತ್ತಕ್ಕಿಂತ ಎರಡು ಪಟ್ಟು ಪ್ರೋತ್ಸಾಹ ಧನವನ್ನು ನೀಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ನಿರ್ಧರಿಸಿತು.

**(ಕ್ರಮ: ಕುಲಸಚಿವರು)**

**ಐಟಂ–3** **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ 2014–2015 ನೇ ಸಾಲಿನ ಆಯವ್ಯಯ ಅಂದಾಜು ಮತ್ತು 2013–2014 ನೇ ಸಾಲಿನ ಪರಿಷ್ಕೃತ ಆಯವ್ಯಯಕ್ಕೆ ಅನುಮೋದನೆ ಕುರಿತು.**

**ಠರಾವು:**

ಚರ್ಚೆಯ ನಂತರ, ಕೃಷಿ ವಿಶ್ವವಿದ್ಯಾಲಯ, ರಾಯಚೂರಿನ 2013–2014 ನೇ ಸಾಲಿನ ಪರಿಷ್ಕೃತ ಆಯವ್ಯಯ ಮತ್ತು 2014–2015 ನೇ ಸಾಲಿನ ಅಂದಾಜು ಆಯವ್ಯಯವನ್ನು ಘನ ವೇದಿಕೆಯು ಅನುಮೋದನೆ ನೀಡಿತು.

**(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು)**

**ಐಟಂ–4** **ಸಿ.ಎ.ಎಸ್.2006 ಯೋಜನೆಯಡಿ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಶಿಕ್ಷಕರ ಪದೋನ್ನತಿ ಕುರಿತು**

**ಠರಾವು:**

ಸಿ.ಎ.ಎಸ್.–2006 ಅಡಿ ಎ.ಜಿ.ಪಿ. 6000 ರಿಂದ 7000 ಹಾಗೂ ಎ.ಜಿ.ಪಿ. 7000 ರಿಂದ 8000 ಕ್ಕೆ ಯಾದಿಯಲ್ಲಿ ನಮೂದಿಸಿರುವಂತೆ ಅರ್ಹ ಶಿಕ್ಷಕರ ಮುಂಬಡ್ತಿಗಾಗಿ ಘನ ವೇದಿಕೆಯು ಅನುಮೋದನೆ ನೀಡಿತು.

**(ಕ್ರಮ: ಕುಲಸಚಿವರು)**

ಐಟಂ–5 ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವಿವಿಧ ಆವರಣಗಳಲ್ಲಿ ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಟೆಂಡರ್ ಮಾಡಿದ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ಕುರಿತು.

ಠರಾವು:

ವಿಸ್ತೃತ ಚರ್ಚೆಯ ನಂತರ, ಕಡಿಮೆ ದರ ನಮೂದಿಸಿದ ಬಿಡ್ಡುದಾರರಿಗೆ ಟೆಂಡರ್ ಮಾಡಿದ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳುವ ಸಲುವಾಗಿ ಕಾರ್ಯಾದೇಶಗಳನ್ನು ನೀಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. ಆದಾಗ್ಯೂ, ಕಾಂಟ್ರ್ಯಾಕ್ಟ್‌ದಾರರು ಗುಣಮಟ್ಟದ ಕಾರ್ಯಗಳನ್ನು ಕೈಗೊಳ್ಳುತ್ತಿದ್ದಾರೆಯೇ ಎಂಬುದರ ಬಗ್ಗೆ ನಿಗಾವಹಿಸಲು ಮತ್ತೊಮ್ಮೆ ಸಲಹೆ ನೀಡಲಾಯಿತು.

(ಕ್ರಮ : ಕಾರ್ಯನಿರ್ವಾಹಕ ಅಭಿಯಂತರರು)

## ಹೆಚ್ಚುವರಿ ಕಾರ್ಯಸೂಚಿ ವಿಷಯಗಳು.

ಹೆಚ್ಚುವರಿ ಐಟಂ–1 ಅಂತರರಾಷ್ಟ್ರೀಯ ತರಬೇತಿ / ಕಾರ್ಯಾಗಾರಗಳಲ್ಲಿ / ಸಮ್ಮೇಳನ / ಅಲ್ಪಾವಧಿ ಕೋರ್ಸ್ ಇತ್ಯಾದಿಗಳಲ್ಲಿ ಶಿಕ್ಷಕರು /ವಿಜ್ಞಾನಿಗಳಿಗೆ ವಿದೇಶಗಳಿಗೆ ಪ್ರತಿನಿಯೋಜನೆ ಮಾಡುವ ಕುರಿತು

ಠರಾವು:

ದೀರ್ಘ ಚರ್ಚೆಯ ನಂತರ, ಅಂತರರಾಷ್ಟ್ರೀಯ ತರಬೇತಿ / ಕಾರ್ಯಾಗಾರಗಳಲ್ಲಿ / ಸಮ್ಮೇಳನ / ಅಲ್ಪಾವಧಿ ಕೋರ್ಸ್ ಇತ್ಯಾದಿಗಳಲ್ಲಿ ಶಿಕ್ಷಕರು /ವಿಜ್ಞಾನಿಗಳಿಗೆ ವಿದೇಶಗಳಿಗೆ ಪ್ರತಿನಿಯೋಜನೆ ಮಾಡಿ ಕೈಗೊಂಡ ಕ್ರಮಕ್ಕೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸ್ಥಿರೀಕರಿಸಿತು. ಅನುಮೋದನೆ ನೀಡಲಾಯಿತು.

(ಕ್ರಮ: ಕುಲಸಚಿವರು)

ಹೆಚ್ಚುವರಿ ಐಟಂ–2 ಅಸಿಸ್ಟಂಟ್ ಜನರಲ್ ಆಫ್ ಪೋಲಿಸ್, ಬೆಂಗಳೂರು ಅವರು ಡಾ. ಬಿ.ಟಿ. ಪೂಜಾರಿ ಅವರನ್ನು ಸೇವೆಯಿಂದ ವಜಾ ಮಾಡಲು ಶಿಫಾರಸ್ಸು ಮಾಡಿರುವ ಕುರಿತು

ಠರಾವು:

ವಿಸ್ತೃತ ಚರ್ಚೆಯ ನಂತರ, ಹಾಗೂ ದಾಖಲೆಗಳನ್ನು ಮತ್ತು ಪತ್ರಗಳನ್ನು ಪರಿಶೀಲಿಸಿದ ನಂತರ ಈ ಕೆಳಗೆ ತಿಳಿಸಿದಂತೆ ಕ್ರಮ ಕೈಗೊಳ್ಳಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ತೀರ್ಮಾನಿಸಿತು:

1. ಅಡಿಷ್ನಲ್ ಡೈರೆಕ್ಟರ್ ಜನರಲ್ ಆಫ್ ಪೋಲಿಸ್, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ಬೆಂಗಳೂರು ಅವರ ನಿರ್ದೇಶನದಂತೆ ಮುಂದುವರೆದ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಹಾಗೂ ಡಾ. ಬಿ.ಟಿ. ಪೂಜಾರಿ, ಡೀನ್ (ಕೃಷಿ), ಕೃಷಿ ಮಹಾವಿದ್ಯಾಲಯ, ಗುಲಬರ್ಗಾ ಅವರನ್ನು ಸಮಜಾಯಿಷಿಗಳನ್ನು ಮತ್ತು ಯಾವುದಾದರೂ ಹೆಚ್ಚುವರಿ ದಾಖಲೆಗಳೇನಾದರೂ ಇದ್ದಲ್ಲಿ ದಿನಾಂಕ 28-4-2014 ರೊಳಗಾಗಿ ಸಲ್ಲಿಸಲು ಅವಕಾಶ ಕೊಟ್ಟು ಕಾರಣ ಕೇಳಿ ಸೂಚನಾ ಪತ್ರವನ್ನು ನೀಡಲು ಸಹ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷರು ಹಾಗೂ ಕುಲಪತಿಗಳವರಿಗೆ ಘನ ವೇದಿಕೆಯು ಅಧೀಕರಿಸಿತು.

2. ಮುಂದುವರೆದು, ಕಾರಣ ಕೇಳಿ ಸೂಚನಾ ಪತ್ರವನ್ನು ಹಾಗೂ ಡಾ. ಬಿ.ಟಿ. ಪೂಜಾರಿಯವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಯಿಂದ ವಜಾ ಮಾಡುವ, ಪ್ರಾಧ್ಯಾಪಕರ ಹುದ್ದೆಯಲ್ಲಿ ಪಡೆದ ಹೆಚ್ಚುವರಿ ಹಣವನ್ನು ವಸೂಲಿ ಮಾಡುವ ಮತ್ತು ಕ್ರಿಮಿನಲ್ ಮೊಕದ್ದಮೆ ಹೂಡಲು ನಿಯಮಾನುಸಾರ ಎಫ್.ಐ.ಆರ್. ದಾಖಲಿಸಲು ಆದೇಶವನ್ನು ತಯಾರಿಸುವ ಸಲುವಾಗಿ ವಿಶ್ವವಿದ್ಯಾಲಯದ ವಕೀಲರು ಹಾಗೂ ಸಲಹೆಗಾರರು (ಆಡಳಿತ) ಅವರ ನೆರವು ಪಡೆದುಕೊಳ್ಳಲು ಪ್ರಧಾನ ಕಾರ್ಯದರ್ಶಿಗಳು (ಕೃಷಿ) ಅವರು ಸಲಹೆ ನೀಡಿದರು. (ಕ್ರಮ: ಕುಲಸಚಿವರು)

ಮುಂದುವರೆದು, ಶ್ರೀಮತಿ ನಫೀಸ್ ಫಾತಿಮಾ ಅವರು ಕೃವಿವಿ ರಾಯಚೂರಿನ ವ್ಯವಸ್ಥಾಪನಾ ಮಂಡಳಿಯ ಸದಸ್ಯತ್ವವನ್ನು ಹಿಂಪಡೆದಿರುವುದರಿಂದ, ಕೃವಿವಿ ರಾಯಚೂರಿನ ಹಣಕಾಸು ಸಮಿತಿಯನ್ನು ಪುನರ್–ರಚಿಸಿ ಡಾ. ಹೆಚ್.ಎಸ್. ಸಾದತ್ ಅಲಿ ಖಾನ್ ಅವರನ್ನು ಸದರಿ ಸಮಿತಿಯ ಸದಸ್ಯರೆಂದು ನಾಮನಿರ್ದೇಶನ ಮಾಡಲು ನಿರ್ಧರಿಸಲಾಯಿತು.

ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ–ಕಾರ್ಯದರ್ಶಿಯವರ ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

| | |
|---|---|
| ಸಹಿ /– 26–4–2014 | ಸಹಿ /– 26–4–2014 |
| **(ಬಿ.ವಿ. ಪಾಟೀಲ)** | **(ಬಿ.ಎಸ್. ಜನಗೌಡರ್)** |
| ಕುಲಪತಿಗಳು ಹಾಗೂ ಅಧ್ಯಕ್ಷರು | ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ |
| ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. | ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. |

**(ಬಿ.ಎಸ್. ಜನಗೌಡರ್)**
ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.